

ಪಿಂಗಾಣಿ ವಸ್ತುಗಳು

ಬಹಳ ಜನರಿರಲಿಲ್ಲ. ನಾವು ಭೇಟಿಕೊಟ್ಟ ಕುಮಲಿಕಿಜಿಕ್ ಹಳ್ಳಿಯಲ್ಲೂ ಇದೇ ಚಿತ್ರವಿತ್ತು. ಸಂಜೆ ನಮಾಜಿಗೆ ಐದಾರು ಮಂದಿಯಾದರೆ, ಬಾಕಿಯವರು ಮಸೀದಿ ಮುಂದಿನ ಚಿಲುಮೆಯ ಪಕ್ಕ, ಮರದಡಿ ಕೂತು ಚಹ – ಸಿಗರೇಟು ಸೇವಿಸುತ್ತ ಹರಟುತ್ತಿದ್ದರು.

ಇಸ್ತಾನ್‌ಬುಲ್‌ನ ರೋಮನ್ ಅಭಿಜಾತ ವಾಸ್ತುಶೈಲಿಯ ಏಕತಾನತೆಯಿಂದ ದಣಿದಿದ್ದ ನಮಗೆ, ಟರ್ಕಿಯ ಪ್ರಾಚೀನ ಪರಂಪರೆ ಉಳಿಸಿಕೊಂಡಿರುವ ಕುಮಲಿಕಿಜಿಕ್, ಬಿಡುಗಡೆಯ ಭಾವ ನೀಡಿತು. ಅಲ್ಲಿ ಕಲ್ಲು ಮಣ್ಣು ದೇವದಾರುಗಳ ದಿಮ್ಮಿಗಳನ್ನು ಬಳಸಿ ಕಟ್ಟಿದ ಸಾಂಪ್ರದಾಯಿಕ ಮಾಳಿಗೆ ಮನೆಗಳಿವೆ. 'ಟಿ' ಆಕಾರದ ಕಟ್ಟಿಗೆ ಚೌಕಟ್ಟನ್ನು ಜೋಡಿಸಿ ಗೋಡೆಕಟ್ಟುವ ವಾಸ್ತುಜ್ಞಾನ ವಿಶೇಷವೆನಿಸಿತು. ಬೆಟ್ಟದ ಮೇಲಿಂದ ಬಂದ ನೀರು ಬೀದಿಯ ಕಲ್ಲುಹಾಸುಗಳ ಮೇಲೆ ಜುಳುಜುಳಿಸುತ್ತಿತ್ತು. ಜೇನು – ವೈನು, ಹಣ್ಣು –ಹಂಪಲು ಮಾರುವ ಪ್ರತಿ ಮನೆಯಲ್ಲೂ ದ್ರಾಕ್ಷಿಬಳ್ಳಿಯ ಚಪ್ಪರಗಳು. ಆದರೆ ಜನ –ನಮ್ಮ ಹಂಪಿಯಲ್ಲಿರುವಂತೆ – ಗ್ರಾಮೀಣ ಮುಗ್ಧತೆ ಕಳೆದುಕೊಂಡ ವ್ಯವಹಾರಸ್ಥರು. ಚುಟುಕಾದ ಯಾಂತ್ರಿಕ ಸಂಭಾಷಣೆ. ಅವರಾದರೂ ದಿನವೂ ಬರುವ ಪ್ರವಾಸಿಗರಿಗೆ ಎಷ್ಟೆಂದು ಆಪ್ತತೆ ನಟಿಸಿಯಾರು?

ಇಸ್ತಾನ್‌ಬುಲ್ ಎಲ್ಲ ಘಟ್ಟದೂರುಗಳಂತೆ ಏರುತಗ್ಗು ರಸ್ತೆಗಳಿಂದ ಕೂಡಿದೆ. ದಿಬ್ಬದಂಚಿನ ಮನೆಗಳಿಗೆ ಇಕ್ಕಟ್ಟಾದ ರಸ್ತೆಗಳಲ್ಲಿ ಕಾರನ್ನು ಹತ್ತಿಸಿ ಪಾರ್ಕ್ ಮಾಡುವಲ್ಲಿ ಜನ ಪರಿಣತರಾಗಿದ್ದಾರೆ. ಒಂದು ಸಂಜೆ ತಿರುಗಾಡುತ್ತ ಗಲ್ಲಿಯೊಳಗೆ ಹೋದೆವು. ಅದೊಂದು ಡೋನರ್ ಕಬಾಬಿನ ಚಿಕ್ಕ ಹೋಟೆಲ್. ಶಾಖದ ನಡುವೆ ತಿರುಗುವ ಮಾಂಸದ ಮುದ್ದೆಯಿಂದ ಬೆಂದ ಹೊರಭಾಗವನ್ನು ಖಡ್ಗದಿಂದ ಹೆರೆದುಕೊಡುತ್ತಾರೆ. ನಮ್ಮನ್ನು ಕಂಡು ಅಂಗಡಿಯಲ್ಲಿದ್ದ ದಂಪತಿಗಳ ಮುಖದ ಮೇಲೆ ಮಂದಹಾಸ ಮೂಡಿತು. 'ಪಾಕಿಸ್ತಾನಿ?' ಎಂದರು. 'ನೋ, ಹಿಂದೂಸ್ತಾನಿ' ಎಂದೆವು. 'ಓಹ್! ಹಿಂದ್' (ಭಾರತೀಯರು) ಎಂದು ಕೈಮುಗಿದರು. ಅಷ್ಟರಲ್ಲಿ ಫಳಫಳಿಸುವ ಕಣ್ಣುಗಳ ಅವರ ಮಕ್ಕಳು ಹೊರಬಂದವು. ನಮ್ಮನ್ನು ಅಂಗಳದ ಕುರ್ಚಿಯಲ್ಲಿ ಕೂರಿಸಿ ಸುಡುಸುಡು ಕಬಾಬು ತಂದುಕೊಟ್ಟರು. ಏನು ಮಾಡಿದರೂ ಹಣ ಸ್ವೀಕರಿಸಲಿಲ್ಲ.

ಬೀದಿಯಲ್ಲಿ ಹೋಗುವಾಗ ಕೆಲವರು ನಮ್ಮನ್ನುದ್ದೇಶಿ 'ಪಾಕಿಸ್ತಾನಿ' ಎಂದು ಕೂಗಿದ್ದುಂಟು. ಭಾರತದವರೂ ಪಾಕಿಸ್ತಾನದವರೂ ಬಣ್ಣ ಮುಖಚಹರೆಗಳಲ್ಲಿ ಸಮಾನ ಲಕ್ಷಣವುಳ್ಳವರಾದ್ದರಿಂದ, ಹೊರದೇಶಗಳಲ್ಲಿ ಗೊಂದಲ ಸಾಮಾನ್ಯ. ಆದರೆ 'ಪಾಕಿಸ್ತಾನಿ' ಕೂಗಿನಲ್ಲಿ ತುಸು ನಿಂದಾದನಿ ಇದ್ದಂತಿತ್ತು. ಇದಕ್ಕೆ ಕಾರಣವಿದೆ. ನಮ್ಮಲ್ಲಿ ಬಿಹಾರಿಗಳಂತೆ ಅಲ್ಲಿ ಪಾಕಿಸ್ತಾನಿ ವಲಸಿಗರು ಕೆಳಸ್ತರದ ಕೆಲಸಗಳನ್ನು ಮಾಡುವರು. ವೀಸಾ ವಿಷಯದಲ್ಲಿ ಯೂರೋಪಿಯನ್ನರಿಗಿಲ್ಲದ ನಿರ್ಬಂಧಗಳು, ಪಾಕ್ – ಬಾಂಗ್ಲಾ – ಭಾರತದವರಿಗಿವೆ. ಪಾಕಿಸ್ತಾನದವರು –ಸಾಮಾನ್ಯವಾಗಿ ಬಡವರು – ವೀಸಾ ಮುಗಿದ ಬಳಿಕ ವಾಪಸಾಗದೆ ಸಣ್ಣಪುಟ್ಟ ಕೆಲಸ ಮಾಡಿಕೊಂಡು ಉಳಿದುಬಿಡುತ್ತಾರಂತೆ. ಕಡಿಮೆ ವೇತನಕ್ಕೆ ದುಡಿವ ಅವರನ್ನು ರಕ್ಷಿಸುವ ಹಿತಾಸಕ್ತ ಲಾಬಿಗಳೂ ಅಲ್ಲಿವೆ. ಸಮಾನ ಧರ್ಮ ಹುಟ್ಟಿಸಬಹುದಾದ ಭ್ರಾತೃತ್ವಭಾವವು, ಆರ್ಥಿಕ ರಾಜಕೀಯ ಪ್ರಶ್ನೆ ಬಂದಾಗ ಎಗರಿ ಹೋಗುತ್ತದೆ. ಇದನ್ನು ಪಾಕಿಸ್ತಾನ–ಬಾಂಗ್ಲಾದೇಶ, ಭಾರತ–ನೇಪಾಳ, ಇಂಗ್ಲೆಂಡ್–ಐರ್ಲೆಂಡ್ ಸಂಘರ್ಷಗಳಲ್ಲೂ ಜಗತ್ತು ಕಂಡಿದೆ.

ತನ್ನ ವಲಸೆನೀತಿಯಿಂದ ಟರ್ಕಿ ಎದುರಿಸುತ್ತಿರುವ ಸಮಸ್ಯೆಯೆಂದರೆ, ಯುದ್ಧಗ್ರಸ್ತ ಸಿರಿಯಾದಿಂದ ನಿರಾಶ್ರಿತರು ಪ್ರವಾಹದಂತೆ ಬಂದಿರುವುದು. ಟರ್ಕಿಯಲ್ಲಿ ಭಿಕ್ಷಾಟನೆ ನಿಷಿದ್ಧ. ಆದರೂ ಸಿರಿಯನ್ ನಿರಾಶ್ರಿತರು 'ವಿ ಆರ್ ಫ್ರಂ ಸಿರಿಯಾ, ಕೈಂಡ್ಲಿ ಕ್ಯಾನ್ ಯು ಹೆಲ್ಪ್ ಅಸ್' ಫಲಕ ಹಿಡಿದು ಅಥವಾ ಸಿಗರೇಟು ಮಾರುತ್ತಲೋ ಇರುವುದನ್ನು ಗಮನಿಸಬಹುದು. ಸುಲೇಮಾನ್ ಮಸೀದಿ ಬಳಿ ಒಬ್ಬ ತಾಯಿ ಪುಟ್ಟಮಗಳನ್ನು ಪ್ರವಾಸಿಗರಿಗೆ ತೋರಿಸುತ್ತ, ಈಕೆಯ ಅಪ್ಪ ಯುದ್ಧದಲ್ಲಿ ಸತ್ತನೆಂದು ಹೇಳುತ್ತಿದ್ದುದೂ ಕೇಳಿಸಿತು. ನಮ್ಮ ಹೋಟೆಲಿನಲ್ಲಿ ಒಬ್ಬ ತರುಣ, ರೂಂಬಾಯ್ ಕೆಲಸ ಮಾಡುತ್ತಿದ್ದ. ಅವನ ಮುಖದ ಮ್ಲಾನತೆ ಕಂಡು ವಿಚಾರಿಸಿದೆವು. ಸಿರಿಯಾದ ಯುದ್ಧದಲ್ಲಿ ತಂದೆ ಕಳೆದುಕೊಂಡು ಇಲ್ಲಿಗೆ ಬಂದಿದ್ದಾನೆ. ದುಡಿದು ಜರ್ಮನಿಗೆ ಹೋಗಿ ಇಂಜಿನಿಯರಿಂಗ್ ಓದುವ ಕನಸು ಅವನಿಗೆ.

ಒಂದು ದಿನ, ರಾತ್ರಿಯೂಟ ಮುಗಿದ ಬಳಿಕ, ನಮ್ಮ ಹೋಟಲಿನಿಂದ ಹೊರಟು, ನಗರದ ರಸ್ತೆಗಳಲ್ಲಿ ತಿರುಗುತ್ತ ಹೋದೆವು. ಕೆಲವು ಮಹಿಳೆಯರು ಬೀದಿಬದಿ ನಿಂತಿರುವುದು ಕಂಡಿತು. ವೇಶ್ಯಾವಾಟಿಕೆ ನಗರಗಳ ಜತೆಯಲ್ಲೇ ಹುಟ್ಟಿಬರುತ್ತದೆ. ಬಹುಶಃ ಈ ಮಹಿಳೆಯರು ಸಿರಿಯನ್ ನಿರಾಶ್ರಿತರೂ ಇದ್ದಾರು. ರಸ್ತೆಬದಿ ಸಿದ್ಧಉಡುಪು ಮಾರುವ ಒಬ್ಬಾಕೆಯಿದ್ದಳು. ನಲವತ್ತರ ಆಸುಪಾಸಿನ ಆರಡಿಯ ಸುಂದರಿ. ಸಿಗರೇಟು ಸೇದುತ್ತ 'ಯಾವುದೇ ವಸ್ತುವಿಗೆ 5 ಲಿರಾ' ಎಂದು ಕೂಗುತ್ತಿದ್ದಳು. 'ನೀವು ಸಿರಿಯನ್ನರೇ?' ಕೇಳಿದೆ. 'ಯಾವ ದೇಶದವರಾದರೇನು? ಇನ್ಸಾನಿಯತ್ ನೋಡಬೇಕಲ್ಲವೇ?' ಎಂದು ಕಹಿಯಾಗಿ ನಗುತ್ತ ಪ್ರಶ್ನೆಯನ್ನು ನನಗೇ ಹಿಂತಿರುಗಿಸಿದಳು. ಆಕೆಯ ನಗೆ ಮೋಹಕವಾಗಿತ್ತು. ವ್ಯಕ್ತಿತ್ವ ಘನತೆಯಿಂದ ಕೂಡಿತ್ತು.

ಒಂದು ಕಾಲಕ್ಕೆ ಇಸ್ತಾನ್‌ಬುಲ್ ರಾಜಕುಮಾರ ಯೂಸೂಫನನ್ನು ನಿಷ್ಕರುಣೆಯಿಂದ ಹೊರಹಾಕಿತ್ತು. ಈಗ ವಲಸಿಗ ತಬ್ಬಲಿಗಳಿಗೆ – ತಾಯಿಕೋಳಿ ಹೂಮರಿಗಳನ್ನು ರೆಕ್ಕೆಯೊಳಗೆ ಅವಿಸಿಕೊಳ್ಳುವಂತೆ – ಆಶ್ರಯಕೊಡುತ್ತಿದೆ. ಚರಿತ್ರೆಯುದ್ದಕ್ಕೂ ರಕ್ತಸಿಕ್ತ ಯುದ್ಧಗಳಿಗೂ ಅಧಿಕಾರ ಹಸ್ತಾಂತರಗಳಿಗೂ ಸಾಕ್ಷಿಯಾಗಿ ಬೆಳೆದಿರುವ ಮಹಾನಗರವೊಂದರ ಈ ತಾಯ್ತನ ಆಪ್ತವಾಯಿತು. ನಗರವೊಂದಕ್ಕೆ ಚೆಲುವು ಅದರ ಉದ್ಯಾನಗಳಿಂದಲ್ಲ, ತಬ್ಬಲಿಗಳಿಗೆ ಆಸರೆ ಕೊಡುವುದರಿಂದ ಒದಗುತ್ತದೆ ಎನಿಸಿತು. ವೈರುಧ್ಯವೆಂದರೆ, ಟರ್ಕಿ ತನ್ನದೇ ದೇಶದ ಕುರ್ದಿಶರ ತಬ್ಬಲಿತನವನ್ನು ಅರ್ಥಮಾಡಿಕೊಳ್ಳದೇ ಹೋಯಿತು.

ಪ್ರತಿಕ್ರಿಯಿಸಿ: feedback@sudha.co.in



ಕಡಲ ಮುನ್ನೆಲೆಯಲ್ಲಿ ಇಸ್ತಾನ್‌ಬುಲ್